ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

11

ಇಲಾಖೆ / ವಿಷಯ : DEPARTMENT / SUBJECT: ಸಾರಿಗೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 8/4/21

## ಹಠ ಹಿಡಿದ ಸಾರಿಗೆ ಸಂಸ್ಥೆ ಸಿಬ್ಬಂದಿ, ಇಂದೂ ಖಾಸಗಿ ಸೇವೆಯೇ ಗತಿ

## ಮುಷ್ಕರ ಕೈಬಿಡದಿದ್ದರೆ ಕಠಿಣ ಕ್ರಮ ನಿಶ್ಚಿತ, ಎಚ್ಚರಿಕೆ ನೀಡಿದ ಸರ್ಕಾರ

# ಸುಗಮ ಸಾರಿಗೆಗೆ ಎಸ್ಮಾ ಅಸ್ತ್ರ

8-4-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಹಠ ಬಿಟ್ಟು ಕರ್ತವ್ಯಕ್ಕೆ ಹಾಜರಾಗಿ, ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳೋಣ ಎಂಬ ಸಿಎಂ ಯಡಿಯೂರಪ್ಪ ಅವರ ಮನವೊಲಿಕೆಗೂ ಜಗ್ಗದೆ ರಾಜ್ಯ ಸಾರಿಗೆ ನೌಕರರು ಕೈಗೊಂಡಿರುವ ಮುಷ್ಕರದಿಂದಾಗಿ ಬುಧವಾರ ರಾಜ್ಯದಲ್ಲಿ ಸರ್ಕಾರಿ ಬಸ್ ಸಂಚಾರ ಸಂಪೂರ್ಣ ಸ್ಥಬ್ಧವಾಗಿತ್ತು. ಕೆಲವು ಕಡೆ ವೃದ್ಧರು, ಗರ್ಭಿಣಿ, ಬಾಣಂತಿಯರು ತೊಂದರೆ ಅನುಭವಿಸಿದರು. ಆದರೆ, ಪರಿಸ್ಥಿತಿ ಕೈಮೀರದಂತೆ ಮುಂಜಾಗ್ರತೆಯಿಂದ ಖಾಸಗಿ ಬಸ್‌ಗಳ ಪರ್ಯಾಯ ವ್ಯವಸ್ಥೆ ಕಲ್ಪಿಸಿದ್ದ ಸರ್ಕಾರ ಗುರುವಾರದಿಂದ ಇನ್ನಷ್ಟು ಕಠಿಣ ಕ್ರಮಕ್ಕೆ ಮುಂದಾಗಿದೆ.

**ಸಾರಿಗೆ ಸಂಗ್ರಾಮ**

ಬಿಎಂಟಿಸಿಯ 3000ಕ್ಕೂ ಹೆಚ್ಚು ಪ್ರೊಬೆಷನರಿ ಸಿಬ್ಬಂದಿಗೆ ಶುಕ್ರವಾರ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಶಿಸ್ತುಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿ ನೋಟಿಸ್ ಜಾರಿ ಮಾಡಿರುವ ಸರ್ಕಾರ, ಮುಷ್ಕರ ನಿರತ ಖಾಯಂ ಸಿಬ್ಬಂದಿಗೂ ಕರ್ತವ್ಯಕ್ಕೆ ಮರಳಲು ಶುಕ್ರವಾರ ಮುಂಜಾನೆವರೆಗೂ ಗಡುವು ನೀಡಿದೆ. ತಪ್ಪಿದಲ್ಲಿ ಎಸ್ಮಾ ಅಸ್ತ್ರ ಜಾರಿ ಮಾಡುವ ಎಚ್ಚರಿಕೆ ನೀಡಿದೆ.

» **9 ಸಾವಿರ ಖಾಸಗಿ ವಾಹನ ಸಂಚಾರ ಸೇವೆಗೆ**

**ಇಂದು ಬಸ್ ಬರಲ್ಲ:** ಬೇಡಿಕೆ ಈಡೇರಿಕೆಗಾಗಿ ಕಳೆದ ನಾಲ್ಕು ತಿಂಗಳಲ್ಲಿ ಎರಡನೇ ಬಾರಿ ಮುಷ್ಕರಕ್ಕೆ ಇಳಿದಿರುವ ನೌಕರರು ಕರೊನಾ ಪರಿಸ್ಥಿತಿ ಮುಂದಿಡುತ್ತಿರುವ ಸರ್ಕಾರದ ಕಾರಣ ಕೇಳಲು ಸಿದ್ಧರಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವುದರಿಂದ ಎಲ್ಲ ಬೇಡಿಕೆ ಈಡೇರಿಸಲಾಗದೆಂದು ಸರ್ಕಾರ ಒತ್ತಿ ಹೇಳಿದರೂ ನೌಕರರು ಮಾತ್ರ 6ನೇ ವೇತನ ಆಯೋಗದ ಶಿಫಾರಸು ಜಾರಿ ಮಾಡಬೇಕೆಂದು ಹಠ ಮುಂದುವರಿಸಿದ್ದಾರೆ. ಸಾರಿಗೆ ಮುಷ್ಕರ ಗುರುವಾರವೂ ಮುಂದುವರಿದಿರುವ ಕಾರಣ ಸರ್ಕಾರಿ ಬಸ್ ಗಳ ಸೇವೆ ಇರುವುದಿಲ್ಲ.

**22 ಸಾವಿರ ಬಸ್ ನಿಲುಗಡೆ:** ಒಟ್ಟಾರೆ ಬುಧವಾರ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳ 22 ಸಾವಿರಕ್ಕೂ ಹೆಚ್ಚಿನ ಬಸ್‌ಗಳು ರಸ್ತೆಗಿಳಿಯಲಿಲ್ಲ. ಸರ್ಕಾರ ಖಾಸಗಿ ಬಸ್‌ಗಳು, ಮ್ಯಾಕ್ಸಿ ಕ್ಯಾಬ್ ಸೇರಿ ಇನ್ನಿತರ ಸಾರ್ವಜನಿಕ ಸೇವೆ ನೀಡುವ ವಾಹನಗಳ ಸಂಚಾರಕ್ಕೆ ಅನುಮತಿ ನೀಡಿತ್ತು.

**ಪುಟ 4**

## 17 ಕೋಟಿ ರೂ. ಆದಾಯ ಖೋತಾ

**ಬುಧವಾರ ರಸ್ತೆ ಸಾರಿಗೆ ನಿಗಮಗಳಿಗೆ ₹17 ಕೋಟಿ ಆದಾಯ ಖೋತಾವಾಗಿದೆ. ಕೆಎಸ್ಸಾರ್ಟಿಸಿಗೆ ಸುಮಾರು ₹7.50 ಕೋಟಿ, ಬಿಎಂಟಿಸಿಗೆ 3 ಕೋಟಿ ರೂ., ಈಶಾನ್ಯ-ವಾಯವ್ಯ ನಿಗಮಗಳಿಗೆ ತಲಾ 3.50 ಕೋಟಿ ರೂ. ಆದಾಯ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.**




### ಮುಂದೇನು?

- ಪ್ರತಿಭಟನೆ ತೊರೆದು ಮಾತುಕತೆಗೆ ಬರಲು ಆಹ್ವಾನ
- ಬಂದ್ ಅಂತ್ಯಗೊಳಿಸಲು ಶುಕ್ರವಾರದ ಗಡುವು, ಬಳಿಕವೂ ಬಂದ್ ನಡೆಸಿದರೆ ಎಸ್ಮಾ ಜಾರಿಗೆ ಚಿಂತನೆ

### ಏನೇನಾಯ್ತು?

- ಪ್ರಯಾಣಿಕರ ಅನುಕೂಲಕ್ಕಾಗಿ ಏ. 9, 10ರಂದು 9 ವಿಶೇಷ ರೈಲುಗಳ ವ್ಯವಸ್ಥೆ ಮಾಡಲು ರೈಲ್ವೆ ಇಲಾಖೆಗೆ ಸರ್ಕಾರದ ಮನವಿ
- ಬೆಂಗಳೂರು ಮೆಟ್ರೋ ರೈಲಿಗೆ ಹೆಚ್ಚಿದ ಬೇಡಿಕೆ, ಒಂದೇ ದಿನ ಐದಾರು ತಿಂಗಳ ದಾಖಲೆ ಮುರಿದ ಪ್ರಯಾಣಿಕರು
- ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಕರ್ತವ್ಯಕ್ಕೆ ಹಾಜರಾದ ಸಾರಿಗೆ ನೌಕರರಿಗೆ ಸನ್ಮಾನ
- ಯಾದಗಿರಿಯಲ್ಲಿ ಬಸ್ ಇಲ್ಲದ ಪರಿಣಾಮ ಮಗುವನ್ನು ಆಸ್ಪತ್ರೆಗೆ ಕರೆದೊಯ್ಯಲು ಪರದಾಡಿದ ಬಾಣಂತಿ
- ಹೆಲ್ಮೆಟ್ ಧರಿಸಿ ಧಾರವಾಡಕ್ಕೆ ಬಸ್ ಓಡಿಸಿ ಗಮನ ಸೆಳೆದ ಬೆಳಗಾವಿ ಚಾಲಕ

## ಮುಷ್ಕರ ಕೈಬಿಟ್ಟು ಮಾತುಕತೆಗೆ ಬನ್ನಿ

ಬೆಳಗಾವಿ: ಸಾರಿಗೆ ಸಂಸ್ಥೆಯ ನೌಕರರ 9 ಬೇಡಿಕೆಗಳ ಪೈಕಿ 8 ಬೇಡಿಕೆಗಳನ್ನು ಈಗಾಗಲೇ ಈಡೇರಿಸಿದ್ದರೂ ನೌಕರರು ಹಠ ಮಾಡುವುದು ಸರಿ ಅಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಸ್ವಾರ್ಥಕ್ಕಾಗಿ ನೌಕರರು ಮುಷ್ಕರಕ್ಕೆ ಮುಂದಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ತಕ್ಷಣ ಮುಷ್ಕರ ಕೈಬಿಟ್ಟು ಮಾತುಕತೆಗೆ ಬನ್ನಿ. ಯಾರ ಜತೆಗಾದರೂ ಮಾತನಾಡಲು ಸಿದ್ಧನಿದ್ದೇನೆ ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು. ಎಸ್ಮಾ ಜಾರಿ ಸಂಬಂಧ ಚರ್ಚೆ ನಡೆದಿದ್ದು, ಪರಿಸ್ಥಿತಿ ನೋಡಿಕೊಂಡು ತೀರ್ಮಾನ ಕೈಗೊಳ್ಳಲಾಗುವುದು. ಖಾಸಗಿ ವಾಹನಗಳ ಚಾಲಕರು ಪ್ರಯಾಣಿಕರಿಂದ ಹೆಚ್ಚಿನ ಹಣ ಪಡೆಯಬಾರದು. ಒಂದು ವೇಳೆ ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಬಿಎಸ್‌ವೈ ಇದೇ ಸಂದರ್ಭದಲ್ಲಿ ಎಚ್ಚರಿಕೆ ನೀಡಿದರು.



» **ಸಾರಿಗೆ ನೌಕರರಿಗೆ ಸಿಎಂ ಕಿವಿಮಾತು**

12

# ಎಸ್ಮಾ ಅಸ್ತ್ರ ಪ್ರಯೋಗ

ಮೊದಲನೇ ಪುಟದಿಂದ...

ಬೆಂಗಳೂರಿನಲ್ಲಿ 3,124 ವಾಹನಗಳು ಸೇರಿ ರಾಜ್ಯದಲ್ಲಿ 9 ಸಾವಿರಕ್ಕೂ ಹೆಚ್ಚಿನ ಸ್ಟೇಜ್ ಕ್ಯಾರೇಜ್ ವಾಹನಗಳು, ಮ್ಯಾಕ್ಸಿ ಕ್ಯಾಬ್, ಟೆಂಪೋ ಟ್ರಾವೆಲರ್‌ಗಳು ಸೇವೆ ನೀಡಿದವು. ಈ ಎಲ್ಲ ವಾಹನಗಳಿಗೂ ಬಿಎಂಟಿಸಿ ಮತ್ತು ಕೆಎಸ್ಸಾರ್ಟಿಸಿ ತಮ್ಮ ಪ್ರಯಾಣ ದರದ ವಿವರವನ್ನು ನೀಡಿದ್ದಲ್ಲದೆ, ಅಷ್ಟೇ ಹಣ ವಸೂಲಿ ಮಾಡುವಂತೆಯೂ ಸೂಚಿಸಲಾಗಿತ್ತು.

**ಬೆಳ್ಳಂಬೆಳಗ್ಗೆ ಪರದಾಟ:** ಸರ್ಕಾರದ ಪರ್ಯಾಯ ವ್ಯವಸ್ಥೆ ಭರವಸೆ ನಂಬಿ ಬೆಂಗಳೂರು ಸೇರಿ ಬಹುತೇಕ ಜಿಲ್ಲಾ ಕೇಂದ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಬಸ್ ನಿಲ್ದಾಣಗಳತ್ತ ಬಂದಿದ್ದರು. ಆದರೆ, ಖಾಸಗಿ ವಾಹನಗಳು ನಿರೀಕ್ಷಿತ ಮಟ್ಟದಲ್ಲಿ ಸೇವೆಗೆ ಬರದ ಕಾರಣ ಬೆಳಗ್ಗೆ ಜನರು ಪರದಾಡಿದರು. ಮಧ್ಯಾಹ್ನ 12 ಗಂಟೆ ನಂತರ ಖಾಸಗಿ ಬಸ್‌ಗಳು ರಸ್ತೆಗಿಳಿದಿದ್ದರಿಂದಾಗಿ ತೊಂದರೆ ತಪ್ಪಿತಾದರೂ ಪ್ರಯಾಣಿಕರ ಕೊರತೆ ಕಾಡಿತು. ರಾಜ್ಯದ ವಿವಿಧೆಡೆ ಕೂಡ ಇದೇ ಚಿತ್ರಣ ಕಂಡು ಬಂತು.

**» ಕರ್ತವ್ಯಕ್ಕೆ ಹಾಜರಾಗದವರಿಗೆ ವೇತನ ಕಡಿತ**

**ರಹದಾರಿ ವಿನಾಯಿತಿ:** ವಿಶೇಷ ಪ್ರಕರಣವೆಂದು ಪರಿಗಣಿಸಿ, ಮುಷ್ಕರದ ಅವಧಿಯಲ್ಲಿ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಒದಗಿಸುವ ಖಾಸಗಿ ವಾಹನಗಳಿಗೆ ಅಗತ್ಯವಿರುವ ರಹದಾರಿಯಿಂದ ವಿನಾಯಿತಿ ನೀಡಲಾಗಿದೆ. ಜತೆಗೆ ಅನುಪಯುಕ್ತ ನೊಂದಾಯಿತ ಪ್ರಯಾಣಿಕ ವರ್ಗದ ಖಾಸಗಿ ವಾಹನಗಳಿಗೆ ಏಪ್ರಿಲ್‌ಗೆ ಅನ್ವಯವಾಗುವಂತೆ ಮೋಟಾರು ವಾಹನ ತೆರಿಗೆ ಪಾವತಿ ವಿನಾಯಿತಿ ನೀಡಿ ಆದೇಶಿಸಲಾಗಿದೆ. ಮುಷ್ಕರದಲ್ಲಿ ಪಾಲ್ಗೊಂಡು ಕರ್ತವ್ಯಕ್ಕೆ ಹಾಜರಾಗದ ನೌಕರರಿಗೆ ವೇತನ ನೀಡುವುದಿಲ್ಲ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸಿ. ಶಿಖಾ ಸ್ಪಷ್ಟಪಡಿಸಿದ್ದಾರೆ.

**ಕೆಲಸಕ್ಕೆ ಬಂದವರಿಗೆ ಜೀವ ಬೆದರಿಕೆ :** ಮುಷ್ಕರಕ್ಕೆ ಸೆಡ್ಡು ಹೊಡೆದು ಕೆಲ ನೌಕರರು ಬಿಎಂಟಿಸಿಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರು. ಹೀಗೆ ಕೆಲಸಕ್ಕೆ ಬಂದ ಚಾಲಕರಿಗೆ ಕೆಲ ಸಂಘಟನೆಗಳು ಸನ್ಮಾನವನ್ನು ಮಾಡಿದರು. ರಾಜ್ಯಾದ್ಯಂತ 160 ಸರ್ಕಾರಿ ಬಸ್‌ಗಳು ಪೊಲೀಸ್ ಭದ್ರತೆಯಲ್ಲಿ ಸಂಚರಿಸಿವೆ. ಬೆಂಗಳೂರಿನಲ್ಲಿ ವಿಮಾನನಿಲ್ದಾಣ ಸೇವೆ ನೀಡುವ ಬಸ್‌ಗಳಿಗೆ ಪೊಲೀಸ್ ಜೀಪ್ ಮೂಲಕ ಎಸ್ಕಾರ್ಟ್ ನೀಡಲಾಯಿತು.